# ತಪೋವಾಣಿ

ಸಂ. 7 ಸಂ. 4 ಏಪ್ರಿಲ್ 2010 ರೂ.15

ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**
**ಅನು: ಶ್ಯಾಮಲಾದೇವಿ**

ಜನರು ಸಾಧನೆಯ ಹೆಸರಿನಲ್ಲಿ 'ಶಕ್ತಿ'ಗಳ ಬೆನ್ನಟ್ಟಿ ಹೋಗುವುದನ್ನು ನನ್ನ ಗುರು ಉತ್ತೇಜಿಸಲಿಲ್ಲ. ಶಕ್ತಿಗಳನ್ನು ಪಡೆಯುವುದು ಸುಲಭ ಮತ್ತು ಕಳೆದುಕೊಳ್ಳುವುದೂ ಸುಲಭ ಎಂದು ಅವರು ಸ್ಪಷ್ಟವಾಗಿ ಹೇಳಿದ್ದರು. ಶಕ್ತಿಗಳು ನಮ್ಮನ್ನು ಆಧ್ಯಾತ್ಮಿಕರನ್ನಾಗಿಸುವುದಿಲ್ಲ. ಮೂಲತಃ, ಆಧ್ಯಾತ್ಮಿಕತೆ ಎಂದರೆ ಪ್ರತಿಯೊಂದು ಮಟ್ಟದಲ್ಲಿ ಪ್ರೀತಿಯನ್ನು ಅಭಿವ್ಯಕ್ತಿಸುವುದು. ಶಕ್ತಿಗಳೊಂದಿಗೆ ಆಟವಾಡುವವರು ಸಾಮಾನ್ಯವಾಗಿ ಅ–ಪ್ರೇಮವನ್ನು ಅಭಿವ್ಯಕ್ತಿಸುತ್ತಾರೆ. ಅವರಲ್ಲಿ ಶರಣಾಗತಿ ಇರುವುದಿಲ್ಲ. 'ಅಹಂ' ಆಳುತ್ತದೆ. ಶಕ್ತಿಗಳು ತಾತ್ಕಾಲಿಕ. ಪ್ರೀತಿ ಶಾಶ್ವತ. ದೈವತ್ವದೊಂದಿಗೆ ಶ್ರುತಿಗೊಂಡಿರುವವರು ಅತ್ಯಧಿಕ ಶಕ್ತಿ–ಸಾಮರ್ಥ್ಯವುಳ್ಳವರು. ದೈವತ್ವದಲ್ಲಿ ಎಲ್ಲ ಶಕ್ತಿಗಳೂ ಇವೆ. ಅದು ನಮ್ಮನ್ನು ಕಾಪಾಡುತ್ತದೆ ಮತ್ತು ಎಲ್ಲರೀತಿಯ ನೆರವನ್ನೂ ನಮಗೆ ತಂದುಕೊಡುತ್ತದೆ. ಶಕ್ತಿಗಳ ಬೆನ್ನಟ್ಟಿ ಹೋಗುವುದು ಆಧ್ಯಾತ್ಮಿಕ–ಸಮಯದ ವ್ಯರ್ಥಬಳಕೆ.

ಧ್ಯಾನ ನಮಗೆ ನೇರವಾಗಿ ಶಕ್ತಿಗಳನ್ನು ತಂದುಕೊಡುವುದಿಲ್ಲ. ಆದರೆ ಅದು ನಮ್ಮನ್ನು ಎಲ್ಲ ಶಕ್ತಿಗಳ ಆಗರಕ್ಕೆ ಸಂಪರ್ಕಿಸುತ್ತದೆ.

ಒಬ್ಬ ತಾಂತ್ರಿಕ ನನ್ನ ಗುರುವನ್ನು ಗುಪ್ತವಾಗಿ ಭೇಟಿಮಾಡಿ, ಕೇಳಿಕೊಂಡ, "ನಾನು ನನ್ನ ಎಲ್ಲ ಶಕ್ತಿಗಳನ್ನೂ ಕಳೆದುಕೊಂಡಿದ್ದೇನೆ. ಪುನಃ ನನ್ನ ಶಕ್ತಿಗಳನ್ನು ಪಡೆದುಕೊಳ್ಳಲು ದಯವಿಟ್ಟು ಸಹಾಯಮಾಡಿ." ಆಗ ನನ್ನ ಗುರು, ಆತನಿಗೆ ಅವನ ಗುರುವಿನ ಹತ್ತಿರ ಹೋಗುವಂತೆ ಸಲಹೆ ನೀಡಿದರು. ಆದರೆ ಅದಕ್ಕೆ ಆ ತಾಂತ್ರಿಕ ಸಿದ್ಧನಾಗಿರಲಿಲ್ಲ. ತಾಂತ್ರಿಕ ತನ್ನ ಗುರುವನ್ನು ಭೇಟಿಮಾಡಲು ಹಿಂಜರಿದ, ಏಕೆಂದರೆ ಅವನು ತನ್ನಲ್ಲಿದ್ದ ಶಕ್ತಿಗಳನ್ನು ದುರುಪಯೋಗ ಮಾಡಿಕೊಂಡಿದ್ದ. ಅದನ್ನು ನನ್ನ ಗುರು ನಮಗೆ ಅನಂತರ ಹೇಳಿದರು. ಆತ ಹಲವಾರು ತಪ್ಪುಗಳನ್ನು ಮಾಡಿ, ಶಕ್ತಿಗಳನ್ನು ಕಳೆದುಕೊಂಡಿದ್ದ.

ನನ್ನ ಗುರು ಆಗ ಹೇಳಿದರು, "ಶಕ್ತಿಗಳು ದೇವರೊಂದಿಗಿರಲಿ ಮತ್ತು ದೇವರು ನಮ್ಮೊಂದಿಗಿರಲಿ."

ಪುಸ್ತಕಗಳು, ಉಪನ್ಯಾಸಗಳು ಮತ್ತು ತಂತ್ರಗಳು ನಮ್ಮ ಆಧ್ಯಾತ್ಮಿಕ ಬೆಳವಣಿಗೆಗೆ ಸಹಾಯಮಾಡುತ್ತವೆ. ಆದರೆ ನಮ್ಮ ಪರಿವರ್ತನೆ ಮತ್ತು ಜ್ಞಾನೋದಯಕ್ಕೆ, 'ಅನುಭವ' ಅತ್ಯಗತ್ಯವಾಗಿ ಬೇಕು. ಇದು ಇಚ್ಛಿಸಿದಾಗ ಸುಲಭವಾಗಿ ಸಿಗುವ ಮನಸ್ಸಿನ ಅನುಭವವಲ್ಲ. ಇದು ಆತ್ಮದ ಅನುಭವ. ಇದು ಧ್ಯಾನದ ಗಹನ–ನಿಶ್ಚಲತೆಯ ಸ್ಥಿತಿಯಲ್ಲಿ ಅನುಭವಿಸುವ ವಿಸ್ತಾರತೆ, ಸಂಪೂರ್ಣತೆ ಮತ್ತು ಅನಂತತೆಯ ಅನುಭವ. ಇದಕ್ಕಾಗಿಯೇ, ಧ್ಯಾನ ಅಷ್ಟೊಂದು ಮುಖ್ಯ.

ಹೆಚ್ಚು ಜನರು ಹೆಚ್ಚು ಧ್ಯಾನಮಾಡಿದಾಗ ಒಳಗೆ ಮತ್ತು ಹೊರಗೆ ಬದಲಾವಣೆಗಳು ಉಂಟಾಗುತ್ತವೆ. ಶಾಂತಿ ಮತ್ತು ಸಮೃದ್ಧಿಗಳಿಗೆ ಬದಲಾವಣೆಗಳು ತುರ್ತಾಗಿ ಮತ್ತು ಅತ್ಯಗತ್ಯವಾಗಿ ಬೇಕಾಗಿವೆ.

ಬೆಳಕಿನ ಯುಗಕ್ಕೆ ಬದಲಾವಣೆಯಾಗುತ್ತಿರುವ ಸೂಚಕವಾಗಿ ಅನೇಕ ಜನ ಧ್ಯಾನವನ್ನು ತೆಗೆದುಕೊಳ್ಳುತ್ತಿರುವುದು ಉತ್ತೇಜನಕಾರಿಯಾಗಿದೆ. ಈ ಎಲ್ಲ ಹಿಂಸೆ ಮತ್ತು ಭ್ರಷ್ಟಾಚಾರಗಳು ಕ್ರಮೇಣವಾಗಿ ಇಲ್ಲದಂತಾಗುತ್ತವೆ ಎಂಬುದನ್ನು ನಮ್ಮ ಹೃದಯಾಂತರಾಳದಲ್ಲಿ ತಿಳಿಯುವುದು ಉತ್ಸಾಹನೀಡುತ್ತದೆ. ಇದು ಕೇವಲ ಒಂದು ಕನಸಲ್ಲ, ಇದು ಖಚಿತ. ಮುಂದೆ ಆಗುವುದನ್ನು ಈಗಲೇ ನೋಡಬಲ್ಲ ಲೈಟ್ ಮಾಸ್ಟರ್‌ಗಳು, ಹೀಗೆಂದು ಹೇಳುತ್ತಾರೆ.

ನಾನು ಈ ಬರಹವನ್ನು ಹೊಸವರ್ಷ, ಯುಗಾದಿಗೆ ಮೊದಲು ಬರೆಯುತ್ತಿದ್ದೇನೆ. ವೈಯಕ್ತಿಕ ಮತ್ತು ದೊಡ್ಡ ಮಟ್ಟಗಳಲ್ಲೆರಡರಲ್ಲೂ ಅಸಾಧಾರಣವಾದ ಬದಲಾವಣೆಗಳು ಮತ್ತು ಹೊಸ ಪ್ರಾರಂಭಗಳನ್ನು ನಾನು ಮುಂದಾಗಿ ನೋಡುತ್ತಿದ್ದೇನೆ. ನಮ್ಮ ನಿಜ ಸ್ವಭಾವಗಳು ಪ್ರಕಟವಾಗುವುದನ್ನು ಕೂಡ ನಾನು ಮುಂದಾಗಿ ನೋಡುತ್ತಿದ್ದೇನೆ. ಹೊಸ ಚೈತನ್ಯಗಳು ಕೆಲಸ ಮಾಡುತ್ತಿವೆ. ಹೆಚ್ಚು ಬೆಳಕು ಹರಡುತ್ತಿದೆ.

ನಾವು ಹೆಚ್ಚು ಬೆಳಕನ್ನು ಅನುಭವಿಸಬೇಕು ಮತ್ತು ನಮ್ಮ ಈ ಸುಂದರ ಭೂಮಿಯ ಮೇಲೆ ಹೆಚ್ಚು ಬೆಳಕನ್ನು ಹರಡಬೇಕು. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ 560 077. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ–ಮೇಲ್: info@lightagemasters.com ವೆಬ್–ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

ಡಿಸ್ನಿ ಕಿಡ್ಸ್ ಮಾಂಟೆಸರಿ ಸ್ಕೂಲ್
6ನೇ ಕ್ರಾಸ್, ಜ್ಯೋತಿನಗರ,
ಚಂದ್ರಾ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.

- 22-4-2010 ರಂದು, ಗುರುವಾರ 11ಘಂಟೆಗೆ ತಪೋನಗರದಲ್ಲಿ, ಜೂನಿಯರ್ ಮತ್ತು ಸೀನಿಯರ್ ಸಾಧಕರಿಗಾಗಿ ಓರಿಯಂಟೇಶನ್ ಕ್ಲಾಸ್ ಏರ್ಪಡಿಸಿದೆ.
- ದೂರಕಲಿಕೆ ಸಾಧಕರು ಕೂಡ ತಪೋನಗರದಲ್ಲಿ ಏರ್ಪಡಿಸಿರುವ ಸೆಷನ್ ಅಟೆಂಡ್ ಮಾಡುವುದರಿಂದ ಅಥವಾ ವೆಬ್‌ಕಾಸ್ಟ್ ಮುಖಾಂತರ ಈ ಓರಿಯಂಟೇಶನ್ ಕ್ಲಾಸ್‌ನಲ್ಲಿ ಭಾಗವಹಿಸಬಹುದು.
- ರಿಜಿಸ್ಟ್ರೇಷನ್‌ಗೆ ಕೊನೆಯ ದಿನಾಂಕ: 10-4-2010.
- ವಿವರಗಳಿಗೆ ಮಾನಸ ಆಫೀಸನ್ನು ಸಂಪರ್ಕಿಸಿ.

### ಸುದ್ದಿ-ಸೂಚನೆ

- 26-2-2010ರಂದು ನಮ್ಮ ವೆಬ್‌ಸೈಟ್ 'www.lightchannels.com'ನ ಪರಿಷ್ಕೃತ ಆವೃತ್ತಿಯನ್ನು ಲಾಂಚ್ ಮಾಡಲಾಯಿತು.
- ಲೈಟ್ ಚಾನಲ್ಸ್ ವಿಶ್ವ ಸಂಚಲನವು ಈಗ ಫೇಸ್‌ಬುಕ್‌ನಲ್ಲಿ ಲಭ್ಯವಿದೆ. ಇದರಲ್ಲಿ ಭಾಗಿಯಾಗಿ ಸಂಚಲನವನ್ನು ಹರಡಿ.
- ಲೈಟ್ ಚಾನಲ್ಸ್ ವಿಶ್ವ ಸಂಚಲನ ಶೀಘ್ರಗತಿಯಲ್ಲಿ ಸಾಗುತ್ತಿದೆ. ಇದಕ್ಕೆ ಹೆಚ್ಚು ವಾಲಂಟಿಯರ್‌ಗಳ ಅಗತ್ಯವಿದೆ. ಆಸಕ್ತರು ನಮ್ಮನ್ನು ಸಂಪರ್ಕಿಸಿ.
- 28-2-2010ರ ಸಾಯಂಕಾಲ ತಪೋನಗರ ನಿವಾಸಿಗಳು ಕಾಮದಹನದ ಪ್ರಯುಕ್ತ ಒಟ್ಟಿಗೆ ಸೇರಿದ್ದರು.

**ಇನ್ನು ಮುಂದೆ ಗುರೂಜಿಯವರೊಂದಿಗೆ ಅನೌಪಚಾರಿಕ ಸಭೆಯನ್ನು ಪ್ರತಿ ತಿಂಗಳು ಎರಡನೇ ಶನಿವಾರಗಳಂದು ಆಯೋಜಿಸಲಾಗಿದೆ.**

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು | ಉಪನ್ಯಾಸಗಳು<br>ಬೆಳಿಗ್ಗೆ 11 ರಿಂದ 12ರವರೆಗೆ<br>ವಿಶೇಷ ಧ್ಯಾನ<br>ಮಧ್ಯಾಹ್ನ 12 ರಿಂದ 1ರವರೆಗೆ |
| ಶುಕ್ರವಾರಗಳು | ಲೈಟ್ ಚಾನಲ್<br>ಬೆಳಿಗ್ಗೆ 10 ರಿಂದ 1 ರವರೆಗೆ |
| 2 ಶುಕ್ರವಾರ | ಗುಡ್ ಫ್ರೈಡೆ ವಿಶೇಷ ಧ್ಯಾನ<br>ಮಧ್ಯಾಹ್ನ 12 ರಿಂದ 1ರವರೆಗೆ |
| 18 ಭಾನುವಾರ | ಮಧ್ಯಾಹ್ನ 2.30ಕ್ಕೆ ಲೈಟ್ ಚಾನಲ್ಸ್ ಗ್ರೂಪ್ ಸಂಧಿಸುತ್ತದೆ |

**ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.**

**ನಮ್ಮ ಪಿನ್‌ಕೋಡ್ 560077ಕ್ಕೆ ಬದಲಾಗಿದೆ. ದಯವಿಟ್ಟು ಇನ್ನುಮುಂದೆ ಅಡ್ರೆಸ್‌ಗೆ ಈ ಪಿನ್‌ಕೋಡ್ ಉಪಯೋಗಿಸಿ.**

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 07-02-10 | ಭರತ್ ರಾಮ್ ಮತು ಬಾಲಸುಂದರ್ |
| 14-02-10 | ಚಂದ್ರಸಾಖಿ ಮಿಸಿರ್, ಗಂಗಾದಾಯಿ, ಆಶಾ ಹೊಸಕೊಪ್ಪ ಮತ್ತು ಸುರೇಶ್‌ಕುಮಾರ್ |
| 21-02-10 | ಮಂಜು ಮಹೇಶ್ವರಿ, ಶಾರದಾ, ರಮೇಶ್ ಮತ್ತು ರಾಮಾ ಘೋಸೇಕರ್ |
| 28-02-10 | ನಿನಾದ್ ಸೋಮನ್, ನೀತಾ ಜೋಶಿ, ಪ್ರಕಾಶ್ ಉಳ್ಳಾರಾ, ರುದ್ವಿಜ್, ಗೀತಾ ದಿವೇಕರ್ ಮತ್ತು ಜಯಂತ್ ದೇಶ್‌ಪಾಂಡೆ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಶುಕ್ರ | ಗುಡ್ ಫ್ರೈಡೆ |
| 06 | ಮಂಗಳ | ಕೃಷ್ಣಾಷ್ಟಮಿ |
| 12 | ಸೋಮ | ಮಾಸ ಶಿವರಾತ್ರಿ |
| 14 | ಬುಧ | ಅಮಾವಾಸ್ಯೆ/ಸೌರಮಾನ ಯುಗಾದಿ |
| 22 | ಗುರು | ಶುಕ್ಲಅಷ್ಟಮಿ |
| 23 | ಶುಕ್ರ | ಶುಕ್ಲದಶಮಿ |
| 28 | ಬುಧ | ಪೂರ್ಣಿಮಾ |

**10-04-2010 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.**

ಈ ತಿಂಗಳ ವಾರ್ತಾಪತ್ರಗಳನ್ನು ಪ್ರಾಯೋಜಿಸಿದವರು ಶ್ರೀಮತಿ ತೇನ್‌ಮೊಳಿ, ಶ್ರೀ ಅವಿನಾಶ್ ರಾವ್ ಮತ್ತು ಶ್ರೀಮತಿ ಸುನೇತ್ರಾ ಜೋಶಿ

"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

## ಲೈಟ್ ಚಾನಲಿಂಗ್ ಸೆಷನ್‌ಗಳನ್ನು ಈಗ ಅನೇಕ ಶಾಲೆಗಳಲ್ಲಿ ನಿಯತವಾಗಿ ನಡೆಸಲಾಗುತ್ತಿದೆ.



ಕಲ್ಮಾಡಿ ಪ್ರೌಢಶಾಲೆ, ಔಂಧ್, ಪುಣೆ



ಪೃಥ್ವೀರಾಜ್ ಹಿಂದಿ ಪ್ರೌಢಶಾಲೆ, ನಾಲ್‌ಪಾಡಾ, ಠಾಣೆ



ರಾಯಲಸೀಮಾ ಶಾಲೆ, ಮದನಪಲ್ಲಿ



ಶಿವಾಜಿ ವಿದ್ಯಾಲಯ, ಶಿವಾಜಿನಗರ, ಠಾಣೆ



ಎಸ್.ಎಮ್.ಆರ್.ವಿ. ಪ್ರೌಢಶಾಲೆ, ನಾಗರ್‌ಕೋಯಿಲ್



ಸೈಂಟ್. ಜೋಸೆಫ್ಸ್ ಕಾನ್ವೆಂಟ್, ನಾಗರ್‌ಕೋಯಿಲ್



ಸಿ.ಕೆ.ಟಿ. ಪ್ರಾಥಮಿಕ ಶಾಲೆ, ಕೊವಿಲ್‌ಪಟ್ಟಿ, ತಮಿಳುನಾಡು



ವಿಕಾಸ್ ವಿದ್ಯಾಕೇಂದ್ರ, ರಾಮಮೂರ್ತಿನಗರ, ಬೆಂಗಳೂರು

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ **www.lightchannels.com** ಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

### 07–02–1020

'ಒಬ್ಬ ವ್ಯಕ್ತಿಯ ಕನಸುಗಳು ಪ್ರತಿಯೊಬ್ಬ ವ್ಯಕ್ತಿಯ ಕನಸುಗಳು ಕೂಡಾ.' ಈ ಕನಸುಗಳನ್ನು ಸಾಧ್ಯವಾದಷ್ಟೂ ಈಡೇರಿಸುವುದು, ವಿಶ್ವದ, ದೇವರ, ಗುರುಗಳ ಮತ್ತು ಅಮರ ಮಹರ್ಷಿಗಳ ಕನಸುಗಳನ್ನು ಪೂರ್ಣಗೊಳಿಸಿದಂತೆ. ಬೆಳಕನ್ನು ಚಾನಲ್ ಮಾಡುವ ವಿಶ್ವ ಸಂಚಲನವನ್ನು ತ್ವರಿತಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಂಡಿರುವ ಕೆಲವು ಅದ್ಭುತ ಆತ್ಮಗಳ ಕಾರ್ಯತತ್ಪರತೆ ಮಹರ್ಷಿ ಅಮರರಿಗೆ ಇಷ್ಟು ವರ್ಷಗಳಲ್ಲಿ ನೀಡಿದ ಮಹತ್ವದ ಕಾಣಿಕೆ ಎಂದರೆ ಅತಿಶಯೋಕ್ತಿಯೇನಲ್ಲ. ಈ ಚೇತನಗಳಿಂದ ಪ್ರೇರಣೆ ಮತ್ತು ಪಾಠಗಳನ್ನು ನಾವು ಪಡೆಯೋಣ. ಅಮರರ ಜನ್ಮದಿನದಂದು 30,000ಕ್ಕಿಂತಲೂ ಹೆಚ್ಚು ಮಕ್ಕಳು ಬೆಳಕನ್ನು ಚಾನಲ್ ಮಾಡಿದರು.

ಈ ವರ್ಷ ಅತ್ಯಂತ ವಿಶೇಷವಾದ ವರ್ಷ. ನಮ್ಮಿಂದ ಅಮರರಿಗೆ ನವೀಕೃತ ವೆಬ್‌ಸೈಟ್–ಅನ್ನು ಕಾಣಿಕೆಯಾಗಿ ಕೊಡಲು ಸಾಧ್ಯವಾಯಿತು. ಈ ವೆಬ್‌ಸೈಟ್‌ನ್ನು ನೋಡಿದರೆ ಇದರ ಹಿಂದಿರುವ ಪ್ರೀತಿ, ಸಮರ್ಪಣಾ ಭಾವ ಎಷ್ಟಿದೆ ಎಂಬುದು ನಿಮಗೆ ತಿಳಿಯುತ್ತದೆ. ನಾವು ಒಂದು ಚಿಕ್ಕ ಗ್ರಂಥಾಲಯವನ್ನು ಕೂಡಾ ಪ್ರಾರಂಭಿಸಿದ್ದೇವೆ. ನಾವು ಹೆಚ್ಚು ಓದಿದಾಗ ಹೊಸ ರೀತಿಗಳಲ್ಲಿ ವ್ಯಕ್ತಪಡಿಸುವುದನ್ನು ಕಲಿಯಬಹುದು. ಓದು, ಧ್ಯಾನ ಮಾಡುವಷ್ಟೇ ಮುಖ್ಯವಾದುದು. ನಾವು ಎಲ್ಲ ಬಾಗಿಲುಗಳನ್ನು ತೆರೆಯಬೇಕು.

ಅಮರರು ನಮಗಾಗಿ ಹೊಸ ಚೈತನ್ಯಗಳಂತಹ ಕಾಣಿಕೆಗಳನ್ನು ತಂದಿದ್ದಾರೆ, ಆದರೆ ಇವೆಲ್ಲವನ್ನು ಬೇರೆ ಲೋಕದಿಂದ ತಂದಿದ್ದಾರೆ. ಈ ಅತ್ಯಲ್ಪ ಅವಧಿಯಲ್ಲಿ, ಅಮರರು ನಾವು ಇನ್ನೊಂದು ಉಪನಿಷತ್ತನ್ನು ಬರೆಯಬಹುದಾದಷ್ಟು ಜ್ಞಾನವನ್ನು ನೀಡಿದ್ದಾರೆ.

ಅಮರರು ಅಸಾಮಾನ್ಯ ವ್ಯಕ್ತಿಯಾಗಿದ್ದರು. ನಾನು ಅವರನ್ನು ಯಾರೊಂದಿಗೂ ಹೋಲಿಸಲಾರೆ. ಅವರ ಸೂಕ್ಷ್ಮಲೋಕದ ಸಾಹಸಗಳು ಮತ್ತು ವಿಶ್ವದ ಯಾವುದೇ ಭಾಗಕ್ಕೆ ಅಶರೀರ ಪ್ರಯಾಣ ಮಾಡಬಲ್ಲರೆಂಬ ವಿಷಯ ಸ್ವಂತ ಅಮರರ ಬಂಧುಗಳಿಗೇ ತಿಳಿದಿರಲಿಲ್ಲ. ಈಗ ಅವರು ಅನೇಕ ವಿಶ್ವಗಳಲ್ಲಿ ಪ್ರಯಾಣ ಮಾಡಬಲ್ಲರೆಂಬ ವಿಷಯವನ್ನು ನಾವು ತಿಳಿದಿದ್ದೇವೆ.

ಯಾರಿಗೇ ಆದರೂ ಜೀವನದ ಯಾವುದೇ ಕ್ಷೇತ್ರದಲ್ಲಿ ಅಮರರು ಸೂಕ್ತ ರೀತಿಯಲ್ಲಿ ಮಾರ್ಗದರ್ಶಿಸಬಲ್ಲವರಾಗಿದ್ದರು. ಆದರೂ ಕೂಡಾ ಅವರು ಪ್ರತಿ ಹೆಜ್ಜೆಯಲ್ಲಿ, ಪ್ರತಿಯೊಂದು ಕಡೆ ಬಹಳ ವಿನಯವಂತರಾಗಿದ್ದರು. ಅಮರರು ಆಧ್ಯಾತ್ಮಿಕತೆಯನ್ನು ಮರುವ್ಯಾಖ್ಯಾನ ಮಾಡಿದ್ದಾರೆ. ಆಧ್ಯಾತ್ಮಿಕತೆ ಪ್ರಾಮಾಣಿಕತೆಯಿಂದ ಕೂಡಿದ್ದು, ದೇವರೊಂದಿಗೆ ಶ್ರುತಿಗೊಂಡು, ದೈವವನ್ನು ಅನುಭವಿಸಿದರೆ ಮತ್ತು ಅಭಿವ್ಯಕ್ತಿಸಿದರೆ ಅಷ್ಟೇ ಸಾಕೆಂದು ಅವರು ಹೇಳಿದ್ದಾರೆ. ಅವರನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಎಲ್ಲ ಮಹಾಗುರುಗಳೊಂದಿಗೆ ಹೀಗೆ ಆಗುವುದು ಸಹಜ.

ಮಾನವೀಯತೆಯನ್ನು ಅನುಭವಿಸುವುದೇ ಆಧ್ಯಾತ್ಮಿಕತೆ ಎಂದು ಅವರು ಹೇಳಿದ್ದಾರೆ. ನಿಮಗೆ ಅಳಬೇಕೆನಿಸಿದರೆ ಅತ್ತು ಬಿಡಿ. ಪ್ರತಿ ಸೂರ್ಯೋದಯವನ್ನು ನೋಡಿ ವಿಸ್ಮಯಗೊಳ್ಳಬೇಕು. ಇಷ್ಟೊಂದು ಸೊಗಸಾಗಿ ಬೇರೆ ಯಾವ ಮಹಾಗುರುವೂ ಹೇಳಿಲ್ಲವೆಂಬುದು ಅತ್ಯಂತ ಮಹತ್ವದ ಅಂಶ.

ಅವರು ಆಚರಣೆಗಳನ್ನು ಮೀರಿ ಹೋಗಬೇಕೆಂದಿದ್ದಾರೆ. ಏಕೆಂದರೆ ಅವು ನಮ್ಮ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಅವುಗಳನ್ನು ತಪ್ಪು ಎಂದು ಅವರು ಯಾವಾಗಲೂ ಹೇಳಿಲ್ಲ. ಒಂದು ಸಂದರ್ಭದಲ್ಲಿ ಅವರು 'ನಾವು ಧ್ಯಾನಗಳನ್ನು ಮೀರಿ ಮುಂದೆ ಹೋಗೋಣ' ಎಂದು ಹೇಳಿದ್ದಾರೆ. ಅವರಂತಹ ಮಹಾಗುರುವೊಬ್ಬರು ಮಾತ್ರ ಇಂಥ ಮಾತುಗಳನ್ನು ಹೇಳಬಲ್ಲರು.

ನಾನು ನೋಡಿದವರಲ್ಲೆಲ್ಲ, ಅಮರರು ಒಬ್ಬ ಮಹಾನ್ ಸಂನ್ಯಾಸಿ. ಅವರು ಎಂದೂ ಕಾವಿಯನ್ನು ಧರಿಸಲಿಲ್ಲ. ಸಂನ್ಯಾಸಿ ಒಂದು ವೃತ್ತದಂತೆ ಪರಿಪೂರ್ಣ ಮತ್ತು ಅಹಂ ಇಲ್ಲದವನು ಎಂದು ಅವರು ಹೇಳಿದ್ದಾರೆ.

ಧ್ಯಾನದ ನಂತರ ಶಂಬಲ ನಿಯಮಗಳು ಅಮರರು ಮನುಕುಲಕ್ಕೆ ನೀಡಿದ ಮಹತ್ವದ ಕೊಡುಗೆಗಳಾಗಿವೆ. ಈ ನಿಯಮಗಳನ್ನು ಅಭ್ಯಾಸ ಮಾಡಿದರೆ ಜೀವನದಲ್ಲಿ ಬರುವ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗುತ್ತವೆ.

ಮುಂಬರುವ ದಿನಗಳಲ್ಲಿ ಎಲ್ಲರೂ ಅನುಸರಿಸುವಂತಹ ಮೌಲ್ಯಾಧಾರಿತ ವ್ಯವಸ್ಥೆ ಮಾತ್ರ ಇರುತ್ತದೆ ಎಂದು ಅಮರರು ಹೇಳಿದ್ದಾರೆ. ಈ ವ್ಯವಸ್ಥೆಯು ಪ್ರೀತಿ, ಶಾಂತಿ, ಸತ್ಯ ಮತ್ತು ಏಕತೆಗಳಿಂದ ಪ್ರಾರಂಭವಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ನಾವು ಅಮರರಿಗೆ ನೀಡಬಹುದಾದ ಅತ್ಯುನ್ನತ ಗುರುದಕ್ಷಿಣೆ ಎಂದರೆ ಅಧ್ಯಾತ್ಮ ಮತ್ತು ಋಷಿಗಳ ಮಾರ್ಗವನ್ನು ಅರ್ಥಮಾಡಿಕೊಳ್ಳುವುದು, ಅವನ್ನು ಅಭ್ಯಸಿಸುವುದು ಮತ್ತು ಬೆಳೆಯುವುದು. ನಾವು ಒದಗಿಸಿರುವ ಕುಂಡಲಿನಿ ಗೋಪುರ, ವಿಶ್ವಚೇತನ ಗೋಪುರ ಇತ್ಯಾದಿ ಸೌಕರ್ಯಗಳನ್ನು ಬಳಸಿಕೊಳ್ಳುವುದು. ಪುಸ್ತಕಗಳನ್ನು ಓದುವುದರಿಂದ ಕೂಡಾ ಗುರುದಕ್ಷಿಣೆ ಕೊಡಬಹುದು. ಇನ್ನು ಮುಂದೆ ಗುರುದಕ್ಷಿಣೆ ಪ್ರೀತಿಯನ್ನು ಹೆಚ್ಚಾಗಿ ತೋರಿಸುವುದಾಗಿರುತ್ತದೆ.

ನಮ್ಮ ಜೀವನದಲ್ಲಿ ಅಮರರನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ನಮ್ಮ ಜೀವನವನ್ನು ಸಂಪೂರ್ಣವಾಗಿ ಬೇರೆ ರೀತಿಯಲ್ಲಿ ರೂಪಿಸಿಕೊಳ್ಳಬೇಕು. ಅವರ ಕನಸುಗಳನ್ನು ನಮ್ಮ ಕನಸುಗಳನ್ನಾಗಿ ಮಾಡಿಕೊಳ್ಳಬೇಕು. ನಾವು ಅಮರರನ್ನು ಹರಡಬೇಕು. ಅಮರರನ್ನು ಹರಡುವುದೆಂದರೆ ಬೆಳಕನ್ನು ಹರಡುವುದು. ನಾವು ಮಹಾನ್ ಋಷಿಗಳ, ಅಮರ ಮತ್ತು ವಿಶ್ವಾಮಿತ್ರ ಮಹರ್ಷಿಗಳ ಹೆಮ್ಮೆಯ ಶಿಷ್ಯರಂತೆ ಬಾಳಬೇಕು.

### 14–02–2010

ನಾವು ಬೆಳಕನ್ನು ಚಾನಲ್ ಮಾಡುವಾಗ, ನಮ್ಮ ಶಾರೀರಿಕ ವ್ಯವಸ್ಥೆ ಕೆಲವು ಚೈತನ್ಯಗಳನ್ನು ಮತ್ತು ಸ್ವಲ್ಪ ಬೆಳಕನ್ನು ಹೀರಿಕೊಳ್ಳುತ್ತದೆ. ಅದನ್ನು ದೀರ್ಘಕಾಲದವರೆಗೆ ಮಾಡಿದಾಗ ಹೆಚ್ಚಿನ ಚೈತನ್ಯಗಳನ್ನು ಹೀರಿಕೊಳ್ಳುತ್ತದೆ. ನಮ್ಮ ಶಾರೀರಿಕ ವ್ಯವಸ್ಥೆಗೆ ಚೈತನ್ಯಗಳ ಬಳಕೆ ಗೊತ್ತಿಲ್ಲ. ಅದಕ್ಕೆ ಬೆಳಕಿನ ಬಳಕೆ ಲೇಶಮಾತ್ರವೂ ಗೊತ್ತಿಲ್ಲ. ಆದ್ದರಿಂದ ಇವುಗಳ ಉಪಯೋಗ ಮಾಡಿಕೊಳ್ಳುವಾಗ ನಾವು ಬಹಳ ಎಚ್ಚರಿಕೆಯಿಂದ ಇರಬೇಕು. ನಾವು ಶಾರೀರಿಕ ವ್ಯವಸ್ಥೆಗೆ ಸ್ವಲ್ಪ ಪ್ರಮಾಣದಲ್ಲಿ ಚೈತನ್ಯಗಳನ್ನು ಮತ್ತು ಬೆಳಕನ್ನು ಒಪ್ಪಿಕೊಳ್ಳುವಂತೆ ತರಬೇತಿ ಮತ್ತು ಶಿಕ್ಷಣ ನೀಡಬೇಕು. ಚಾನಲ್ ಮಾಡುವ ಅವಧಿಯನ್ನು ಕ್ರಮೇಣ ಹೆಚ್ಚಿಸಬಹುದು.

ಸೂಕ್ಷ್ಮ ಶರೀರದಲ್ಲಿ ಕೂಡ ಚಾನಲಿಂಗ್ ಮಾಡಬಹುದು. ಸೂಕ್ಷ್ಮ ಶರೀರದಲ್ಲಿ ಹೆಚ್ಚು ಬೆಳಕನ್ನು ಮತ್ತು ಹೆಚ್ಚು ಚೈತನ್ಯಗಳನ್ನು ಚಾನಲ್ ಮಾಡಬಹುದು.

ಕುಂಡಲಿನಿ ಗೋಪುರದಲ್ಲಿ ಒಬ್ಬರು ಫೋಟೋಗಳನ್ನು ತೆಗೆದುಕೊಂಡರು. ಅವುಗಳಲ್ಲಿ ಬೆಳಕು ಇತ್ತು. ಅದು ಒಂದು ಸೂಕ್ಷ್ಮಲೋಕದ ಜೀವಿ. ಪ್ರತಿ ಸೂಕ್ಷ್ಮ ಜೀವಿಯನ್ನು ಚಿತ್ರದಲ್ಲಿ ಸೆರೆ ಹಿಡಿಯಲಾಗುವುದಿಲ್ಲ, ಕಾರಣ ಅವು ಉದ್ದೇಶ ಪೂರ್ವಕವಾಗಿ ಮರೆಯಾಗಿರುತ್ತವೆ.

ಮಾಸ್ಟರ್ 'ವಿ' ಗ್ರೂಪ್ ಸೇರಲು ತಪೋನಗರದಲ್ಲಿ ನಮ್ಮೊಡನೆ ವಾಸಿಸಬೇಕು. ನಾವು ಕೆಲಸ ಮಾಡುವುದಕ್ಕಾಗಿ ಈ ತಂಡಕ್ಕೆ ಸೇರಿಕೊಳ್ಳುತ್ತೇವೆ. ಕೆಲಸ ಮತ್ತು ಸಾಧನೆ ಜೊತೆಜೊತೆಯಲ್ಲಿ ಸಂಭವಿಸುತ್ತವೆ. ನಾವು ಕೆಲಸಕ್ಕೆ ಸೇರಿದಾಗ, ಎಲ್ಲವನ್ನೂ ಸಮರ್ಪಿಸುತ್ತೇವೆ. ಆಗ ನಮ್ಮ ಜೀವನ ವಿಶ್ವಾಮಿತ್ರ ಮಹರ್ಷಿಗಳು ಮಾರ್ಗದರ್ಶನ ಮಾಡಿದ ರೀತಿಯಲ್ಲಿರುತ್ತದೆ. ನಾವು ಮಾನವ ಕುಲವನ್ನು, ಜೀವನವನ್ನು ಪ್ರೀತಿಸಬೇಕು. ಇಂಥ ಸಮಯಗಳಲ್ಲಿ ಇತರರಿಗೆ ವಿವರಿಸಿ, ಮಾರ್ಗದರ್ಶಿಸುವುದು ನಮ್ಮ ಕೆಲಸವಾಗಿದೆ. ಇದಕ್ಕೆ ಅಗಾಧವಾದ ಸಹನೆಯ ಅಗತ್ಯವಿದೆ. ಇದು ಬೇರೆಯ ಮಟ್ಟದಲ್ಲಿ ಪ್ರೀತಿಯಿಂದ ಮಾಡುವ ಬುದ್ಧಿವಂತಿಕೆಯ ಕೆಲಸವಾಗಿದೆ.

ನಿಮ್ಮ ಜೀವನದಲ್ಲಿ ಸಮಸ್ಯೆಗಳು ತಲೆದೋರಿದರೆ ನಿಮ್ಮ ಆಲೋಚನೆಗಳಲ್ಲಿ ಮತ್ತು ಬದುಕಿನಲ್ಲಿ ಸ್ಪಷ್ಟತೆಯನ್ನು ಮೂಡಿಸಿ. ನೀವು ಪ್ರಾಮಾಣಿಕರಾಗಿದ್ದರೆ, ಸ್ಪಷ್ಟವಾಗಿದ್ದರೆ ನಿಮಗೆ ನೀವು ಮಾಡುವ ಕೆಲಸದ ಬಗ್ಗೆ ತಿಳಿದಿರುತ್ತದೆ. ಈ ಭೂಮಿಗೆ ಬಂದ ಮುಖ್ಯ ಉದ್ದೇಶದಿಂದ ಜೀವನವನ್ನು ವಿಮುಖ ದಿಕ್ಕಿನಲ್ಲಿ ಹೋಗಲು ಬಿಡಬೇಡಿ. ನೀವು ನಿಮ್ಮ ಸ್ವಂತ ಬದುಕಿಗೆ ಹೊಣೆಗಾರರಾಗಿರುತ್ತೀರಿ.

# ಗುರೂಜಿಯುವರ ನುಡಿಗಳು

(ಗುರೂಜಿಯುವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

ಚಿಂತನೆಗೆ ಗ್ರಾಹ್ಯವಾದ ಅಂಶಗಳು :–

1. ಎಲ್ಲರ ಮನಸ್ಸು ಒಂದೇ ರೀತಿ ಇರುವುದಿಲ್ಲ. ಪ್ರತಿಯೊಬ್ಬರ ಮೂಲ ಒಂದೇ ಆಗಿರುವುದಿಲ್ಲ. ನಾವು ವಿವಿಧ ಮನಸ್ಸುಗಳನ್ನು ಹೊಂದಿದ್ದೇವೆ. ಅವುಗಳನ್ನು ಸುಧಾರಿಸಬಹುದು. ಒಂದು ಪ್ರಾಣಿಯ ಮನಸ್ಸನ್ನು ಸುಧಾರಿಸಬಹುದು. ಅದು ಮನಸ್ಸಿಗೆ ಹೊಸ ವಿಷಯವನ್ನು ಸೇರಿಸುವುದರಿಂದ ಅಥವಾ ಒಂದು ಹೊಸ ಮನಸ್ಸನ್ನು ಕೊಡುವುದರಿಂದ ಸಾಧ್ಯ. ಜೀವನದ ಸೌಂದರ್ಯವೆಂದರೆ ಇದು. ಒಂದು ಕೀಟ ಕೂಡಾ ಖುಷಿಯಾಗಬಲ್ಲದು. ಅಷ್ಟೊಂದು ಸ್ವಾತಂತ್ರ್ಯ, ಸಾಧ್ಯತೆ ಮತ್ತು ಅವಕಾಶಗಳಿರುತ್ತವೆ. ಯಾರು ಬೆಳೆಯಲು ಬಯಸುತ್ತಾರೋ ಅವರಿಗೆ ದೇವರುಗಳು ಮತ್ತು ಋಷಿಗಳ ಸಹಾಯಹಸ್ತ ಸದಾ ಸಿದ್ಧವಾಗಿರುತ್ತವೆ.

2.ಇತ್ತೀಚೆಗೆ ಸೇರಿರುವ ಜನ ಎಲ್ಲ ವಿಷಯಗಳನ್ನು ಶೀಘ್ರವಾಗಿ ಮತ್ತು ಸುಲಭವಾಗಿ ಅರ್ಥ ಮಾಡಿಕೊಳ್ಳಬಲ್ಲರು. ಅವರಿಗೆ ಋಷಿಗಳಲ್ಲಿ ನಂಬಿಕೆಯಿದೆ ಮತ್ತು ಅವರನ್ನು ಒಪ್ಪಿಕೊಂಡಿದ್ದಾರೆ.

3.ಆಧ್ಯಾತ್ಮಿಕವಾಗಿ ಮುಂದುವರಿದ ಸಾಧಕರು ಕೂಡಾ ಜೀವನವನ್ನು ಸಮತೋಲನ ಮಾಡಲು ಕಲಿಯಬೇಕಾಗಿದೆ. ಸಮತೋಲನ ಮಾಡುವುದು ಆಧ್ಯಾತ್ಮಿಕ. ನೀವು ಯಾವುದೇ ಮಟ್ಟದಲ್ಲಿ ಜೀವನವನ್ನು ಉದಾಸೀನ ಮಾಡುವಂತಿಲ್ಲ. ಅದನ್ನು ಸಂಪೂರ್ಣವಾಗಿ ಅನುಭವಿಸಬೇಕು.

ನಾನು ಇಲ್ಲಿ ಮಾತನಾಡುವುದು ಒಂದು ಪ್ರಾರಂಭ ಮಾತ್ರ. ನೀವು ಪ್ರಯಾಣಿಸಿ, ಅನ್ವೇಷಣೆ ಮತ್ತು ಸಂಶೋಧನೆ ಮಾಡಬೇಕು. ಆಗ ನೀವು ಸ್ವಾಭಾವಿಕವಾಗಿ ಬೆಳೆಯುತ್ತೀರಿ. ನೀವು ಹೊಸ ಸತ್ಯವನ್ನು ಅಥವಾ ಆಧ್ಯಾತ್ಮಿಕ ಸಂಶೋಧನೆಯನ್ನು ಕಂಡು ಕೊಂಡರೆ, ನನಗೆ ತಲುಪಿಸಿ. ಅದನ್ನು ನಾನು ಎಲ್ಲರಿಗೂ ತಲುಪಿಸುತ್ತೇನೆ. ಜ್ಞಾನ ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಲ್ಲ, ಇಡೀ ಮಾನವ ಕುಲಕ್ಕೆ ನೀಡಿರುವ ಕಾಣಿಕೆ.

## 21–02–2010

ಚಿಂತನೆಗೆ ಗ್ರಾಹ್ಯವಾದ ಅಂಶಗಳು :–

ನಿಮಗೆ ನಂಬಿಕೆ ಇರುವುದನ್ನು ಅನುಸರಿಸಿ. ನೀವು ಋಷಿಗಳ ಅಸ್ತಿತ್ವವನ್ನು ನಂಬುವುದಿಲ್ಲವೆಂದರೆ, ಸತ್ಯಾಂಶ ತಿಳಿಯಲು ಅದರ ಬೆನ್ನಟ್ಟಿ ಹೋಗಿ ಮತ್ತು ಯಾವುದೇ ತೀರ್ಮಾನ ಕೈಗೊಂಡು ನಿಲ್ಲಬೇಡಿ. ಮುಂದೆ ಹೋಗಿ ಸತ್ಯಾನ್ವೇಷಣೆಯಲ್ಲಿ ತೊಡಗಿ. ಅಂತಿಮವಾಗಿ ನಾವೆಲ್ಲ ಸತ್ಯವನ್ನು ತಿಳಿಯುತ್ತೇವೆ. ನಮ್ಮಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ಕಾರಣಕ್ಕೆ ನೋವಿನ ಅನುಭವಕ್ಕೆ ಗುರಿಯಾಗುತ್ತೇವೆ. ನೋವು ಒಂದು ಗಾಯದಂತೆ ವಾಸಿಯಾಗಬೇಕಾಗಿದೆ. ನೋಯಿಸಿದ ವ್ಯಕ್ತಿಯನ್ನು ಕ್ಷಮಿಸುವುದರಿಂದ ನಮ್ಮನ್ನು ನಾವು ವಾಸಿ ಮಾಡಿಕೊಳ್ಳಬೇಕು. ನೀವು ಕ್ಷಮಿಸದ ಹೊರತು, ಲೆಕ್ಕ ಚುಕ್ತ ಆಗುವುದಿಲ್ಲ. ಕ್ಷಮೆ ನಿಮಗೆ ಬೆಳೆಯಲು ಸಹಾಯ ಮಾಡುತ್ತದೆ. ನಿಮ್ಮ ಗಾಯ ಮತ್ತು ನೋವುಗಳನ್ನು ಹೋಗಲಾಡಿಸಲು ಶಂಬಲ ನಿಯಮ–1ರ ಅಭ್ಯಾಸ ಒಂದೇ ಸಾಕು.

ಹೀಲಿಂಗ್ ಒಂದು ಪ್ರತ್ಯೇಕವಾದ ವಿಧಾನವಲ್ಲ. ಅದು ವಿಸ್ತರಿಸುತ್ತ ಹೋಗುತ್ತದೆ, ಪ್ರೀತಿಯನ್ನು ಒಳಗೊಂಡಿದೆ. ಅಂತಿಮವಾಗಿ ಹೀಲಿಂಗ್ ನಮ್ಮನ್ನು ಪರಿವರ್ತನೆಗೊಳಿಸುತ್ತದೆ.

## 28–02–2010

ಒಬ್ಬ ವ್ಯಕ್ತಿಗೆ ತಮ್ಮ ಸೂಕ್ಷ್ಮ ಶರೀರದಲ್ಲಿ ಬೆಳಕನ್ನು ಚಾನಲ್ ಮಾಡುತ್ತಿದ್ದುದು ತಿಳಿದಿರಲಿಲ್ಲ. ನಾನು ಇದನ್ನು ಗಮನಿಸಿ ಅವರಿಗೆ ತಿಳಿಸಿದೆ. ನಾವು ನಮ್ಮ ಸ್ವಂತ ಶರೀರದಿಂದಲೇ ಸ್ವಾಭಾವಿಕವಾಗಿ ಚಾನಲ್ ಮಾಡುವುದನ್ನು ಮುಂದುವರಿಸೋಣ.

ನಾವು ನಮಗೆ ತಿಳಿದ ಜ್ಞಾನವನ್ನು ಅನ್ವಯಿಸೋಣ. ಆಗ ಅದು ವಿವೇಕವಾಗುತ್ತದೆ. ನಾವು ತಂತ್ರಗಳನ್ನು ಅಭ್ಯಾಸ ಮಾಡೋಣ, ಆಗ ತೃಪ್ತಿ ಮತ್ತು ನಿಜವಾದ ಬೆಳವಣಿಗೆ ಉಂಟಾಗುತ್ತದೆ, ಇಲ್ಲವಾದರೆ ನಾವು ಕೇವಲ ಪ್ರಶ್ನೆ ಕೇಳುವವರು ಮತ್ತು ಮಾತಿನ ಶೂರರಾಗುತ್ತೇವೆ. ನಾವು ಏನನ್ನೂ ಸಾಧಿಸುವುದಿಲ್ಲ.

ನಾವು ಆಧ್ಯಾತ್ಮಿಕ ಕಾರ್ಯ ಕೈಗೆತ್ತಿಕೊಂಡ ಮೇಲೆ ಅದಕ್ಕೆ ಬದ್ಧರಾಗಿರಬೇಕು ಮತ್ತು ಸಮಾಜ ಸೇವೆಯಂತಹ ಬೇರೆ ವಿಷಯಗಳನ್ನು ಆರಿಸಿಕೊಳ್ಳಬಾರದು. ಇದು ಬಹಳ ಸರಳ ಸತ್ಯ. ಜನರಿಗೆ ಇದು ತಿಳಿದಿದೆ ಆದರೂ ಇದನ್ನು ಅಲಕ್ಷಿಸುತ್ತಾರೆ ಮತ್ತು ಇತರ ಕ್ಷೇತ್ರಗಳಲ್ಲಿ ಸಾಹಸ ಮಾಡುತ್ತಾರೆ. ಆಧ್ಯಾತ್ಮಿಕ ಮುಖಂಡನ ಕೆಲಸವೆಂದರೆ ಆಧ್ಯಾತ್ಮಿಕತೆಯನ್ನು ಅಭ್ಯಸಿಸುವುದು ಮತ್ತು ಇತರರಿಗೆ ತರಬೇತಿ ಕೊಡುವುದು.

ಇಂದಿನ ಯುವಜನತೆ, ವಿದ್ಯಾರ್ಥಿಗಳು, ತರುಣರು, ವ್ಯಾಸಂಗದ ಅಗಾಧವಾದ ಒತ್ತಡಗಳಿಂದ ಕೂಡಿದ್ದಾರೆ. ಎಲ್ಲ ಕಡೆಗಳಿಂದ, ತಂದೆ–ತಾಯಿಗಳಿಂದ ಒತ್ತಡ ಹೆಚ್ಚಾಗಿದೆ. ಇವರಿಗೆ ಯಾವ ರೀತಿಯ ಸಹಾಯ ಮಾಡಬಹುದು? ಋಷಿಗಳಿಂದ ಬಂದಿರುವ ಈ ಸಲಹೆಗಳು ಬಹಳ ಮಟ್ಟಿಗೆ ಸಹಾಯ ಮಾಡುತ್ತವೆ. ಮೊದಲು, ತಂದೆ–ತಾಯಿಗಳು ತಮ್ಮ ಮಕ್ಕಳಿಗೆ ಇಂಥ ಎಳೆಯ ವಯಸ್ಸಿನಲ್ಲಿ ಒಂದೇ ಕಾಲಕ್ಕೆ ಅನೇಕ ಕೆಲಸಗಳನ್ನು ಮಾಡಲು ಒತ್ತಡ ಹಾಕಬಾರದು. ಅವರು ತಮ್ಮ ಗುರಿಗಳನ್ನು ಮಕ್ಕಳ ಮೇಲೆ ಹೇರಬಾರದು. ಅವರು ಮಕ್ಕಳಿಗೆ ತಮ್ಮ ಕನಸುಗಳು, ಗುರಿಗಳನ್ನು ಪೂರೈಸಿಕೊಳ್ಳಲು ಸಹಾಯ ಮಾಡಬೇಕು. ಅವರಿಗೆ ಸ್ವಾತಂತ್ರ್ಯ ಮತ್ತು ಅವಕಾಶಗಳನ್ನು ನೀಡಬೇಕು. ಅದಕ್ಕೆ ಬಹಳ ತಾಳ್ಮೆ ಮತ್ತು ನಿಯಂತ್ರಣಗಳ ಅಗತ್ಯವಿದೆ. ಅವರ ಮೇಲೆ ಧ್ಯಾನಾಭ್ಯಾಸಗಳನ್ನು ಕೂಡಾ ಹೇರಬಾರದು. ಅವರು ಸಪ್ತರ್ಷಿ ಪ್ರಾಣಾಯಾಮವನ್ನು ಮೂರು ಸುತ್ತು ಅಭ್ಯಾಸ ಮಾಡಲಿ. ಅದು ಅವರ ಸ್ಮರಣ ಶಕ್ತಿಯನ್ನು ಚುರುಕುಗೊಳಿಸಿ, ಏಕಾಗ್ರತೆಯ ಶಕ್ತಿಯನ್ನು ಹೆಚ್ಚಿಸುತ್ತದೆ. ಅದು ಅವರನ್ನು ಪರಿಶುದ್ಧಗೊಳಿಸುವುದಲ್ಲದೆ ಸರಿಯಾದ ವಿಷಯಗಳನ್ನು ಅಭ್ಯಾಸ ಮಾಡಲು ಸಹಾಯ ಮಾಡುತ್ತದೆ. ಆದರೆ ನೀವು ಮಕ್ಕಳಿಗೆ ಇನ್ನೂ ಹೆಚ್ಚಿನ ಸಹಾಯ ಮಾಡಬಯಸಿದರೆ ಬೆಳಕನ್ನು ಕನಿಷ್ಠ ಮೂರು ನಿಮಿಷಗಳ ಕಾಲ ಪ್ರತಿ ನಿತ್ಯವೂ ಚಾನಲ್ ಮಾಡುವಂತೆ ಅವರಿಗೆ ಹೇಳಬಹುದು. ಬೆಳಕು ಅಗಾಧ ಶಕ್ತಿಯನ್ನು ತರುತ್ತದೆ. ಹಿರಿಯರಿಗೆ ಸೂಕ್ತ ಸಲಹೆ ನೀಡಿ ತರಬೇತಿ ನೀಡಬೇಕಾಗಿದೆ. ಇದರಿಂದ ಕಿರಿಯರ ಮೇಲಿರುವ ಒತ್ತಡಗಳನ್ನು ತೆಗೆದು ಹಾಕಬಹುದು.

ಸ್ವಾತಂತ್ರ್ಯವಿಲ್ಲದೆ ನಿರೀಕ್ಷಿತ ಬೆಳವಣಿಗೆಯಾಗುವುದಿಲ್ಲ ಎಂದು ನಾವು ನಂಬುತ್ತೇವೆ. ಇಲ್ಲಿ ವಾಸಮಾಡುವ ಜನರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಶಿಸ್ತಿನ ಸ್ಥಳಗಳಲ್ಲಿ ಸಂಗೀತವನ್ನು ಆಲಿಸುವುದು ಸಿಂಧುವಲ್ಲ. ಬೇರೆ ಸಾಹಿತ್ಯ ಅಥವಾ ಬಯಸಿದ ಯಾವುದೇ ಪುಸ್ತಕವನ್ನು ವಾಚಿಸುವುದು ಸರಿಯಲ್ಲ. ಪಠ್ಯಪುಸ್ತಕಗಳನ್ನು ಹೊರತುಪಡಿಸಿ ಇತರ ಆಯಾಮಗಳಿವೆ ಎಂಬುದನ್ನು ಗಮನಿಸಬೇಕು. ನಮ್ಮ ಇಡೀ ವ್ಯಕ್ತಿತ್ವ ಸಂಪೂರ್ಣವಾಗಿ ಬೆಳೆಯಬೇಕು, ಎಲ್ಲ ಸತ್ವಗಳನ್ನು ಅನ್ವೇಷಿಸಿ, ಮೈಗೂಡಿಸಿಕೊಳ್ಳಬೇಕೆಂದು ಬಯಸುತ್ತೇವೆ. ಅಧ್ಯಾತ್ಮವು ಕೇವಲ ಧ್ಯಾನ ಮಾಡುವುದು ಮತ್ತು ಧಾರ್ಮಿಕ ಬರಹಗಳನ್ನು ಉಲ್ಲೇಖಿಸುವುದಲ್ಲ. ಅಧ್ಯಾತ್ಮ ದೈವಿಕತೆಯನ್ನು ವ್ಯಕ್ತಪಡಿಸುವುದಾಗಿದೆ. ತಪೋನಗರ ಅನೇಕ ಅವಕಾಶಗಳನ್ನು ಮತ್ತು ಕನಸುಗಳನ್ನು ಹೊಂದಿದೆ. ಅವುಗಳನ್ನು ಉಪಯೋಗಿಸಿಕೊಳ್ಳದಿದ್ದರೆ ನಾವು ಬೆಟ್ಟದಷ್ಟು ಕಳೆದುಕೊಳ್ಳುತ್ತೇವೆ.

ಇತ್ತೀಚೆಗೆ ಒಬ್ಬ ವ್ಯಕ್ತಿ ನನ್ನನ್ನು, 'ಋಷಿಗಳು ಏಕೆ ಕಾಣಿಸಿಕೊಳ್ಳುವುದಿಲ್ಲ?' ಎಂದು ಕೇಳಿದರು. ಅಗತ್ಯವಿದ್ದರೆ ಅವರು ಕಾಣಿಸಿಕೊಳ್ಳುತ್ತಾರೆ. ನಾವು ಬೆಳೆಯುತ್ತಿದ್ದೇವೆ ನಿಜ ಆದರೆ ನಮ್ಮ ಬೆಳವಣಿಗೆ ಸಾಲದು. ನಾವಿನ್ನೂ ಬೆಳೆಯಬೇಕಾಗಿದೆ.

ಕರ್ಮಗಳನ್ನು ಕಳೆಯುವ ಕಾಲ ಸನ್ನಿಹಿತವಾಗಿದೆ. ಋಷಿಗಳು ಸುಮಾರು ಎರಡು ತಿಂಗಳ ಹಿಂದೆ ನಮ್ಮ ಕರ್ಮಗಳ 90% ಭಾಗವನ್ನು ಹೋಗಲಾಡಿಸಿದ್ದಾರೆ. ಇನ್ನುಳಿದ 10% ಭಾಗ ಕರ್ಮಗಳನ್ನು ಕಳೆಯುವ ಕಾಲ ಬಂದಿದೆ. ನಾವು ಇವುಗಳನ್ನು ಕಳೆದು ಹಾಕದ ಹೊರತು 2012ನ್ನು ದಾಟಲು ಅಸಾಧ್ಯ. ನಾವು ಧ್ಯಾನಗಳಿಂದ ಮತ್ತು ಸಕಾರಾತ್ಮಕತೆಯಿಂದ ಈ ವ್ಯವಸ್ಥೆಯನ್ನು ಗಂಭೀರವಾಗಿ ಶುಚಿಗೊಳಿಸಿದರೆ, ಕರ್ಮಗಳು ತನ್ನಷ್ಟಕ್ಕೆ ತಾನೇ ಕಳೆಯುತ್ತವೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/-), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/-) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ-ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

**ಸಂ: ವೈಶಾಲಿ ಜೋಶಿ, ಅನು: ಪಾಂಡುರಂಗ**

"Doorways to Light" ಪುಸ್ತಕ ಹೃದಯಸ್ಪರ್ಶಿಯಾಗಿದೆ. ನಿಮ್ಮ ಸರಳತೆ, ವಿನಮ್ರತೆ ಮತ್ತು ದೃಢ ನಿರ್ಧಾರ ನನ್ನ ಮೇಲೆ ಪರಿಣಾಮ ಬೀರಿವೆ. ಈ ಗುಣಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿದೆ. ಇದರಿಂದ ನನ್ನಲ್ಲಾಗಿರುವ ಬದಲಾವಣೆಗಳನ್ನು ಕಂಡು ಎಲ್ಲರೂ ಸಂತೋಷಗೊಂಡಿದ್ದಾರೆ. ಈ ದಿಕ್ಕಿನಲ್ಲಿ ಮುಂದುವರಿಯಲು ನಿಮ್ಮ ಮಾರ್ಗದರ್ಶನ ಬೇಕೆಂದು ನಾನು ಪ್ರಾಮಾಣಿಕವಾಗಿ ನಂಬಿದ್ದೇನೆ. ಆಧ್ಯಾತ್ಮಿಕ ಸಾಧನೆಯ ದಾರಿಯಲ್ಲಿ ದೃಢತೆಯಿಂದ ನಡೆಯಲು ನಿಮ್ಮ ದಿವ್ಯ ಆಶೀರ್ವಾದಗಳು ನನಗೆ ಬೇಕು. *-ಲತಾ ಗಣೇಶ್*

ನನ್ನ ಸಂಶೋಧನಾ ಕಾರ್ಯದ ಒಂದು ಸಮಸ್ಯೆಗೆ ಪರಿಹಾರ ಸಿಗದಿದ್ದಾಗ, ನಾನು ಬಹಳಷ್ಟು ಕಳವಳಗೊಂಡಿದ್ದೆ. ಅಸಹಾಯಕತೆಯಿಂದ ಮನಸ್ಸಿಗೆ ತುಂಬಾ ಖೇದವೆನಿಸಿತ್ತು. ನನ್ನ ದೃಷ್ಟಿ ಇದ್ದಕ್ಕಿದ್ದಂತೆ " The Book of Reflection" ಪುಸ್ತಕದ ಮುಖಪುಟದಲ್ಲಿರುವ ನಿಮ್ಮ ಭಾವಚಿತ್ರದ ಮೇಲೆ ಬಿತ್ತು. ಆ ಪುಸ್ತಕದ ಹಿಂಬದಿಯಲ್ಲಿದ್ದ, "ನೀವು ಏಕಾಂಗಿಯಾಗಿರುವಾಗ, ನಿಮಗೆ ನೋವು ಮತ್ತು ತೊಂದರೆ ಇರುವಾಗ, ಆಕಾಶವನ್ನು ವೀಕ್ಷಿಸಿ" ಎಂಬ ಸಾಲುಗಳನ್ನು ಗಮನಿಸಿದೆ. ನಂತರ ಬೆಳಕನ್ನು ಹರಡಿ, ನಿದ್ದೆ ಮಾಡಿದೆ. ಮರುದಿನ ನನಗೆ ನಿರೀಕ್ಷಿತ ಫಲಿತಾಂಶ ಸಿಕ್ಕಿತು! ನಿಮ್ಮ ಸಹಾಯಕ್ಕೆ ಹೃತ್ಪೂರ್ವಕ ಕೃತಜ್ಞತೆಗಳು. ಈ ಫಲಿತಾಂಶದ ಫಲವನ್ನು ನಿಮಗೆ ಮತ್ತು ಲೈಟ್ ಮಾಸ್ಟರ್‌ಗಳಿಗೆ ಸಮರ್ಪಿಸುತ್ತೇನೆ. *-ಅಭಯ್ ಜೋಶಿ*

ವೈರಾಗ್ಯದ ಬಗ್ಗೆ ನೀವು ಹೇಳಿರುವ ಮಾತುಗಳನ್ನು ಅನುಸರಿಸುತ್ತಿದ್ದೇನೆ. ಪ್ರತಿಯೊಬ್ಬರ ಏಳಿಗೆಗಾಗಿ ಮಾರ್ಗದರ್ಶಿಸುತ್ತಿರುವ ನಿಮ್ಮನ್ನು ಅಭಿನಂದಿಸುತ್ತೇನೆ. ಧ್ಯಾನ ಮಾಡಲು ಆರಂಭಿಸಿದ ನಂತರ ನನ್ನಲ್ಲಿ ವೈರಾಗ್ಯ ಸಹಜ ರೀತಿಯಲ್ಲಿ ಮೂಡಿದೆ ಎಂಬುದನ್ನು ಕಂಡುಕೊಂಡಿದ್ದೇನೆ. ಯಾವಾಗ ಒಬ್ಬ ಸಾಧಕ, ಪ್ರಾಮಾಣಿಕವಾದ ಆಧ್ಯಾತ್ಮಿಕ ಮಾರ್ಗವನ್ನು ಮತ್ತು ಒಬ್ಬ ನಿಜವಾದ ಗುರುವನ್ನು ಹೊಂದುತ್ತಾನೋ, ಆಗ ಆತನ ಜೀವನ ತುಂಬಾ ಸರಳ ಮತ್ತು ಸಂತೋಷದಾಯಕವಾಗಿರುತ್ತದೆ.

*-ಜೆನಿಫರ್ ಡಯಾನೆಜ್*

ವೆಬ್ ಕಾಸ್ಟ್, ಹೊಸ ವೆಬ್‌ಸೈಟ್ ಮತ್ತು ಶಾಲೆಗಳಲ್ಲಿ ನಡೆಸುತ್ತಿರುವ ಲೈಟ್ ಚಾನಲಿಂಗ್ ಮುಂತಾದ ಸುಂದರವಾದ ವಿಚಾರಗಳು ಮತ್ತು ಅಷ್ಟೇ ಸುಂದರವಾಗಿ ಅವುಗಳನ್ನು ಕಾರ್ಯರೂಪಕ್ಕೆ ತರುತ್ತಿರುವ ನಿಮ್ಮನ್ನು ಹಾಗೂ ಸಂಬಂಧಪಟ್ಟ ತಂಡಗಳನ್ನು ಅಭಿನಂದಿಸುತ್ತೇನೆ. ಕೃತಜ್ಞತೆಗಳನ್ನು ವ್ಯಕ್ತಪಡಿಸಲು ನನ್ನಲ್ಲಿ ಪದಗಳಿಲ್ಲ.

*-ಶಿಖಾ*

## ತಪೋನಗರ ಡೈರಿ

**ಸಂ: ಸೀಮಾ ಅಲ್‌ಮೇಲ್, ಅನು: ವರ್ಷಾ ಗುರ್ಜರ್**

01-02-2010 ಎಲ್ಲಾ ವಾಲಂಟಿಯರ್‌ಗಳಿಗೆ ಅವಿಸ್ಮರಣೀಯ ದಿನವಾಗಿತ್ತು. ಮಹರ್ಷಿ ಅಮರರವರ ಜನ್ಮದಿನದ ಉಡುಗೊರೆಯಾಗಿ ಸುಮಾರು 50 ಜನ ವಾಲಂಟಿಯರ್‌ಗಳ ತಂಡ ಲೈಟ್ ಚಾನಲ್ ವಿಶ್ವ ಸಂಚಲನವನ್ನು 30ಕ್ಕಿಂತಲೂ ಹೆಚ್ಚು ಶಾಲೆಗಳಿಗೆ ಕೊಂಡೊಯ್ದರು. ಇದರಲ್ಲಿ ಭಾಗವಹಿಸಿದ್ದ ಎಲ್ಲ ಪ್ರತಿನಿಧಿಗಳ ಅಗತ್ಯಗಳನ್ನು ಪೂರೈಸಲು ತಪೋನಗರದಲ್ಲಿ ಸಡಗರದ ವಾತಾವರಣ ತುಂಬಿತ್ತು. ಕರಪತ್ರ, ಚಾರ್ಟ್‌ಗಳು ಮತ್ತು ಕಿರುಪುಸ್ತಕ ಇತ್ಯಾದಿಗಳನ್ನು ವಿಂಗಡಿಸಿಟ್ಟು ಅವುಗಳನ್ನು ಎಲ್ಲರಿಗೂ ಹಂಚಲಾಯಿತು. ಅಮರರೆಡೆಗಿರುವ ಅಗಾಧ ಸಮರ್ಪಣೆ ಮತ್ತು ದಿವ್ಯ ಪ್ರೇಮಗಳು ಚೈತನ್ಯರೂಪದಲ್ಲಿ ವ್ಯಕ್ತವಾಗಿ ಇಡೀ ವಾತಾವರಣ ಆ ಚೈತನ್ಯಗಳಿಂದ ತುಂಬಿತ್ತು.

ಅದರ ಮುಂದಿನ ಭಾನುವಾರ ಅಮರರವರ ಜನ್ಮದಿನವನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಬಗ್ಗೆ ಒಂದು ಪುಸ್ತಕವನ್ನೇ ಬರೆಯಬಹುದು. "ಪ್ರೀತಿಯನ್ನು ಕಾರ್ಯರೂಪಕ್ಕಿಳಿಸುವುದು, ಕೆಲಸ" ಎಂದು ಮೊದಲ ಬಾರಿಗೆ ವಾಲಂಟಿಯರ್‌ಗಳ ತಂಡಕ್ಕೆ ಅನುಭವವಾಗಿತ್ತು. ಅವರೆಲ್ಲ ಹಿಂದಿನವಾರದ ಲೈಟ್ ಚಾನಲಿಂಗ್ ಕಾರ್ಯಕ್ರಮದ ಸಫಲತೆಯಿಂದ ತುಂಬಿತುಳುಕುತ್ತಿದ್ದರು.

07-02-2010ರ ಮುಂಜಾನೆಯೇ ತಪೋನಗರ ನಿವಾಸಿಗಳೆಲ್ಲ ಸೇರಿ, ಇಡೀ ತಪೋನಗರವನ್ನೆಲ್ಲಾ ವಿವಿಧ ಹೂವುಗಳಿಂದ ಮತ್ತು ಹೂಕುಂಡಗಳಿಂದ ಅಂದವಾಗಿ ಅಲಂಕರಿಸಿದ್ದರು. ಅಷ್ಟರಲ್ಲಿ ನಗರದಿಂದ ಇತರ ವಾಲಂಟಿಯರ್‌ಗಳು ಆಗಮಿಸಿ ತಮ್ಮ ತಮ್ಮ ಸ್ಥಳಗಳಲ್ಲಿ ನಿಂತು, ಸುಮಾರು 500 ಜನರನ್ನು ಸ್ವಾಗತಿಸಿದರು. ಎಂದಿನಂತೆ, ಪ್ರತಿಯೊಬ್ಬರೂ ಗುರೂಜಿಯವರಿಂದ ಆಶೀರ್ವಾದಗಳನ್ನು ಪಡೆದರು.

ಹಿಂದಿನ ವೆಬ್‌ಸೈಟ್ ಬದಲಿಗೆ ಹೊಸ ವೆಬ್‌ಸೈಟ್ www.lightagemaster.ನ್ನು ಅಮರರವರಿಗೆ ಜನ್ಮದಿನದ ಇನ್ನೊಂದು ಉಡುಗೊರೆಯಾಗಿ ನೀಡಲಾಯಿತು. ಕಳೆದ ವರ್ಷ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಫೆಬ್ರವರಿ 26ರಂದು ನಡೆಸಿದ ಲೈಟ್ ಚಾನಲ್ ವಿಶ್ವ ಸಂಚಲನದ ಮೊದಲನೇ ವಾರ್ಷಿಕೋತ್ಸವದ ಅಂಗವಾಗಿ, ಧ್ಯಾನಿಗಳೆಲ್ಲ ಮಧ್ಯಾಹ್ನ 12 ಗಂಟೆಗೆ ತಪೋನಗರದಲ್ಲಿ ಸೇರಿ ಬೆಳಕನ್ನು ಚಾನಲ್ ಮಾಡಿದರು. ನವೀಕೃತ www.lightchannel ವೆಬ್‌ಸೈಟ್‌ನ್ನು ಪುನಃ ಆರಂಭಿಸಲಾಯಿತು.

ಮಹಾಶಿವರಾತ್ರಿಯ ವಿಶೇಷಧ್ಯಾನವನ್ನು ಆಯೋಜಿಸಲಾಗಿತ್ತು. ತಪೋನಗರ ನಿವಾಸಿಗಳ ಕೂಟದಲ್ಲಿ ಒಟ್ಟುಗೂಡಿದ್ದವರೆಲ್ಲರೂ, ಗುರೂಜಿಯವರ ಸಮ್ಮುಖದಲ್ಲಿ ಕಾಮದಹನ ತಂತ್ರವನ್ನು ಅಭ್ಯಾಸ ಮಾಡಿದರು. ■

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)

**ಪ್ರ: ನಾವು ಬೇರೆಯವರ ಕರ್ಮಗಳನ್ನು ತೆಗೆದುಕೊಳ್ಳಬಹುದೇ? ಕರ್ಮಗಳನ್ನು ವರ್ಗಾಯಿಸಬಹುದೇ?**

ಉ: ಸಾಮಾನ್ಯವಾಗಿ ಇಲ್ಲ. ಕರ್ಮಗಳು ನಮ್ಮನ್ನು ತಿದ್ದುತ್ತವೆ, ಆದರೆ ದಂಡಿಸುವುದಿಲ್ಲ. ಕೆಲವು ನಿಯಮಗಳು ಕರ್ಮಗಳ ವರ್ಗಾವಣೆಯನ್ನು ನಿಷೇಧಿಸುತ್ತವೆ. ಒಬ್ಬ ವ್ಯಕ್ತಿಯ ಕರ್ಮಗಳನ್ನು ವರ್ಗಾಯಿಸಿದರೆ ಅಥವಾ ಅಳಿಸಿದರೆ ಆತನ ಕಲಿಯುವಿಕೆಯನ್ನು ಮೊಟಕುಗೊಳಿಸಿದಂತಾಗುತ್ತದೆ. ಕೆಲವು ಅಪರೂಪದ ಸನ್ನಿವೇಶಗಳಲ್ಲಿ ಇದು ಸಾಧ್ಯ. ಇದಕ್ಕೆ ಸರಳವಾದ ಮಾರ್ಗವೆಂದರೆ ಋಷಿಗಳನ್ನು ಪ್ರಾರ್ಥಿಸುವುದು.

**ಪ್ರ: ಈ ಜನ್ಮದಲ್ಲಿ ಪಡೆದ ಅಂಗವಿಕಲತೆಗಳನ್ನು ಆಧ್ಯಾತ್ಮಿಕ ಮಾರ್ಗದಿಂದ ನಿವಾರಿಸಬಹುದೇ?**

ಉ: ಕರ್ಮಗಳಿಂದ ಪಡೆದ ಅಂಗವಿಕಲತೆಗಳನ್ನು ಧ್ಯಾನದಿಂದ ನಿವಾರಿಸಬಹುದು. ಆದರೆ ಅಪಘಾತಗಳಿಂದ ಪಡೆದವುಗಳನ್ನು ನಾವು ಅನುಭವಿಸಲೇಬೇಕು. ನೀವು ಧ್ಯಾನದ ಬಗ್ಗೆ ನಂಬಿಕೆ ಹಾಗೂ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು.

**ಪ್ರ: 'ಓವರ್ ಸೆಲ್ಫ್' ಎಂದರೆ ಏನು?**

ಉ: 'ಓವರ್ ಸೆಲ್ಫ್' ನಮ್ಮ ಒಂದು ಪ್ರಧಾನ ಭಾಗ. ಅದನ್ನು ನಾವು ಇಲ್ಲಿ ಜನ್ಮ ತಾಳುವಾಗ ಹಿಂದೆ ಬಿಟ್ಟು ಬಂದಿರುತ್ತೇವೆ. ದೇವರೇ ನಮ್ಮ ಓವರ್ ಸೆಲ್ಫ್. ನಾವು ದೇವರ ಒಂದು ಭಾಗ. ನಾವು ದೇವರಿಂದ, ನಮ್ಮ ಓವರ್ ಸೆಲ್ಫ್‌ನಿಂದ ಯಾವಾಗ ಬೇಕಾದರೂ ಜ್ಞಾನ, ಶಕ್ತಿ, ಚೈತನ್ಯಗಳನ್ನು ಪಡೆಯಬಹುದು.

**ಪ್ರ: ನೀವು ಮಾಸ್ಟರ್ 'ವಿ' ತಂಡದ ಬಗ್ಗೆ ಹೆಚ್ಚು ಹೇಳುವಿರಾ?**

ಉ: ಮಾಸ್ಟರ್ 'ವಿ' ತಮ್ಮ ತಂಡವನ್ನು ವಿಸರ್ಜಿಸಲು ನಿರ್ಧರಿಸಿದ್ದಾರೆ. ಜನರಿಗೆ ಅದರಿಂದ ಹೊರಗುಳಿಯುವ ಅವಕಾಶವಿದೆ, ಏಕೆಂದರೆ ಮಾಸ್ಟರ್ 'ವಿ' ಜೊತೆ ಕೆಲಸ ಮಾಡಲು ತುಂಬಾ ತ್ಯಾಗದ ಅವಶ್ಯಕತೆಯಿದೆ. ನಾವು ನಮ್ಮ ವೈಯಕ್ತಿಕ ಬಯಕೆಗಳು ಹಾಗೂ ಮೋಕ್ಷದ ಆಕಾಂಕ್ಷೆಯನ್ನು ಕೂಡಾ ಬದಿಗಿರಿಸಿ ಮತ್ತು ವೈಯಕ್ತಿಕ ಬದುಕನ್ನು ತ್ಯಾಗ ಮಾಡಿ, ಸಂಪೂರ್ಣ ಶರಣಾಗಿ ಕೆಲಸ ಮಾಡಬೇಕಾಗುತ್ತದೆ. ನಾವು ಅವರ ಜೊತೆ ಸಂಪೂರ್ಣವಾಗಿ ಶ್ರುತಿಗೊಳ್ಳಬೇಕು. ಇದು ಅಷ್ಟು ಸುಲಭವಲ್ಲ. ನಾವು ತುಂಬಾ ವಿಷಯಗಳನ್ನು ಅರ್ಥಮಾಡಿಕೊಂಡಿದ್ದೇವೆ, ಆದರೆ ಅರಿತುಕೊಳ್ಳುವುದು, ಮತ್ತು ಅನುಭವಿಸುವುದು ಇನ್ನೂ ಬಹಳಷ್ಟಿದೆ. ಮಾಸ್ಟರ್ 'ವಿ' ಒಂದು ಬೆಳಕು. ಅವರನ್ನು ಬೆಳಕೆಂದು ವರ್ಣಿಸಿದ್ದಾರೆ. ನಾವು ಬೆಳಕಾಗಿ ಬೆಳಕನ್ನು ಅನುಭವಿಸಬೇಕು. ಕೆಲಸವೇ ಬೇರೆ. 'ಕೆಲಸ, ಕೆಲಸ ಮತ್ತು ಕೆಲಸ' ಎಂಬುದೇ ಮಂತ್ರ, ಆಗ ಮಾಸ್ಟರ್ 'ವಿ' ಆಯ್ಕೆ ಮಾಡುತ್ತಾರೆ. ನಾವು ಈ ಕ್ಲಾಸಿನಲ್ಲಿ ಅಥವಾ ಈ ಪ್ರಪಂಚಕ್ಕೆ ಅವರ ಗುಂಪಿನ ಬಗ್ಗೆ ಹೇಳದೇ ಇರಬಹುದು. ಆದರೆ ಈ ವ್ಯಕ್ತಿಗಳು ತಮ್ಮ ಕೆಲಸದಿಂದ ಬೆಳಗುತ್ತಾರೆ.

**ಪ್ರ: ಹಲವು ಅನುಭವಗಳ ಹೊರತಾಗಿಯೂ ನಾನು ಏಕೆ ಆಗಾಗ ಕಾಯಿಲೆ ಬೀಳುತ್ತೇನೆ?**

ಉ: ನಾವು ಅನುಭವ ಮತ್ತು ಆರೋಗ್ಯ ಎರಡಕ್ಕೆ ಸಂಬಂಧ ಕಲ್ಪಿಸಬಾರದು. ಈ ಭೌತಿಕ ಸ್ತರದಲ್ಲಿ ಕಾಯಿಲೆ ಬೀಳಲು ಅನೇಕ ಕಾರಣವಿರಬಹುದು. ಕಾಯಿಲೆ ಕರ್ಮಗಳಿಂದಲೂ ಆಗಿರಬಹುದು. ನಾವು ಈ ವಿಷಯಗಳನ್ನು ವೈಯಕ್ತಿಕವಾಗಿ ಪರಿಶೀಲಿಸಬೇಕು. ಅನುಭವಗಳು ಕರ್ಮಗಳನ್ನು ಹೋಗಲಾಡಿಸುವುದಿಲ್ಲ.

**ಪ್ರ: ಸಂಮೋಹನದಿಂದ ಪೂರ್ವಜನ್ಮಕ್ಕೆ ಹಿಮ್ಮರಳುವುದು(ನಿವರ್ತನ) ಸಾಧ್ಯವೇ?**

ಉ: ನಾವು ಒಬ್ಬ ವ್ಯಕ್ತಿಯನ್ನು ಸಂಮೋಹನಗೊಳಿಸಿದಾಗ, ಆತನ ಪ್ರಜ್ಞೆಯನ್ನು ಅಸಫಲ ಅಪೇಕ್ಷೆ ಮತ್ತು ಭ್ರಮಾಚಿತ್ರಗಳಿರುವ ಅರೆ-ಪ್ರಜ್ಞೆಯ ಮನಸ್ಸಿಗೆ ಕೊಂಡೊಯ್ಯಲಾಗುತ್ತದೆ. ಆದರೆ ಪೂರ್ವಜನ್ಮದ ಘಟನೆಗಳು ಸುಪ್ತಪ್ರಜ್ಞೆಯಲ್ಲಿರುತ್ತವೆ. ಸಂಮೋಹನ ನಮ್ಮನ್ನು ಮನಸ್ಸಿನ ಈ ಸ್ತರಕ್ಕೆ ಕೊಂಡೊಯ್ಯುವುದಿಲ್ಲ. ಧ್ಯಾನದಿಂದ ಮಾತ್ರ ನಾವು ಮನಸ್ಸಿನ ಈ ಸ್ತರವನ್ನು ತಲುಪಬಹುದು.


**ಪ್ರ: ಒಬ್ಬ ವ್ಯಕ್ತಿ ಕೆಲವು ದಿನ ಕಡಿಮೆ ಸಮಯ ಧ್ಯಾನ ಮಾಡಿದರೆ ಆತನ ಪ್ರಗತಿಯ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದೇ?**

ಉ: ಚೆಕಪ್ ಸಮಯದಲ್ಲಿ ನಿಮ್ಮನ್ನು ಇನ್ನೊಂದು ಹೊಸಹಂತಕ್ಕೆ ಏರಿಸಿದಾಗ ಮತ್ತು ನಿಮ್ಮ ಪ್ರಗತಿಯನ್ನು ಮೌಲ್ಯಮಾಪನ ಮಾಡಿದಾಗ, ಒಂದು ನಿಯತಾಂಕವೆಂದರೆ ಎಷ್ಟು ಘಂಟೆ ಮತ್ತು ಎಷ್ಟು ದಿನಗಳು ನೀವು ಧ್ಯಾನ ಮಾಡಿದ್ದೀರಿ ಎಂಬುದು. ಋಷಿಗಳು ಇತರ ಅನೇಕ ವಿಷಯಗಳನ್ನು ಗಮನಿಸುತ್ತಾರೆ. ಅವರು ನಿಮ್ಮ ವಿನಯ, ತಾಳ್ಮೆ ಮತ್ತು ಸ್ವೀಕೃತಿಯ ಮಟ್ಟ ಹಾಗೂ ಪ್ರೀತಿಯ ವ್ಯಕ್ತತೆಯ ವ್ಯಾಪ್ತಿಯನ್ನು ಗಮನಿಸುತ್ತಾರೆ. ಆಧ್ಯಾತ್ಮಿಕತೆ ಎಂದರೆ ಯಾವಾಗಲೂ ಒಳ್ಳೆಯವರಾಗಿರುವುದು, ವಾತ್ಸಲ್ಯ, ಸಹಾಯತೆ, ವಿಸ್ಮೃತೆ ಮತ್ತು ಶಾಂತತೆಯಿಂದಿರುವುದು. ■

### ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Beyond 2012 | 80/- |
| 2012 - End or Beginning | 100/- |
| iGuruji - Vol 1 | 150/- |
| iGuruji - Vol 2 | 120/- |
| Living in the Light of My Guru | 220/- |
| A Package from the Rishis (containing 5 Booklets) - How to Meditate - Dhyana Yoga - Descent of Soul - Practising Shambala Principles - Astral Ventures of A Modern Rishi | 250/- |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಋಷಿಗಳಿಂದ ಬಂದ ಕೊಡುಗೆ (ಐದು ಪುಸ್ತಕಗಳು) - ಧ್ಯಾನ ಮಾಡುವುದು ಹೇಗೆ - ಧ್ಯಾನ ಯೋಗ - ಆತ್ಮದ ಅವರೋಹಣ -ಶಂಬಲ ನಿಯಮಗಳ ಅಭ್ಯಾಸ - ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 250/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रका ावाट (Marathi) | 150/- |
| २०१२ – अंत की आरंभ? (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| ंबला तत्त्वांचा अभ्यास (Marathi) | 50/- |
| एका आधुनिक ऋषीचे | |
| सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| २०१२ नंतर (Marathi) | 80/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रका ा की ओर (Hindi) 150/- | |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యుడం ఎలా | 50/- |
| వెలుగులో జీవించడం | 10/- |
| కాంతి | 10/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



ಗುರೂಜಿ ಕೃಷ್ಣಾನಂದ *(1939)*

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಲೈಟ್ ಚಾನಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭ ಕೆ.ರಾವ್, ಅನು: ಸ್ವರ್ಣಲತ)

ಜನವರಿ 25 ರಂದು 'ದಿ ಗ್ರೇಟ್ ರಾ' ಧ್ಯಾನ ಮಂದಿರಕ್ಕೆ ಸಂಪರ್ಕ ಕಲ್ಪಿಸಿಕೊಂಡು ಧ್ಯಾನ ಮಾಡಿದಾಗ, ನನ್ನ ದೇಹ ನೀಲಿ ಬೆಳಕಿನಿಂದ ತುಂಬಿದ್ದ ಅನುಭವ ನನಗಾಯಿತು. ನನ್ನ ದೇಹದ ಬದಲು ನೀಲಿ ಬೆಳಕು ಅಲ್ಲಿತ್ತು. ನನ್ನ ದೇಹವು ಗಾತ್ರದಲ್ಲಿ ದೊಡ್ಡದಾಗಿ, ಅದರಲ್ಲಿ ಇಡೀ ಸೃಷ್ಟಿ ಕಾಣಿಸುತ್ತಿತ್ತು. ನನ್ನೊಳಗೆ ಗುಡುಗಿನ ಹಾಗೂ ಅನೇಕ ಬಾಂಬ್‌ಗಳ ಸ್ಫೋಟದ ಶಬ್ದ, ಹಿಮಪಾತ ಇತ್ಯಾದಿ ಅನುಭವವಾಯಿತು. ಬಿಸಿ ಹಾಗೂ ತಂಪಿನ ಅನುಭವ ಏಕಕಾಲದಲ್ಲಿ ನನಗಾಯಿತು. ನನ್ನ ದೇಹವು ಹಗುರವಾಗಿದ್ದಂತೆ ಅನಿಸಿದರೂ, ಚೈತನ್ಯಗಳ ಪ್ರಭಾವದಿಂದಾಗಿ ಭಾರವಾಗಿ ಕಂಡು ಬಂದಿತು. ಆ ಅನುಭವ ಸ್ವಲ್ಪ ಕಾಲದವರೆಗಿತ್ತು. ಧ್ಯಾನದ ನಂತರ ದೇಹವು ಭಾರವಾಗಿದ್ದು, ಎದ್ದು ನಡೆಯಲೂ ಸಾಧ್ಯವಾಗಲಿಲ್ಲ. ನನಗೆ ಆಹಾರ ಸೇವಿಸಲೂ ಆಗದೆ, ಪ್ರಯತ್ನಪೂರ್ವಕವಾಗಿ ಮಲಗಿದೆ. –ಪ್ರಿಯಾಂಕಾ ಮಿಶ್ರಾ

ಜನವರಿ 25ರಂದು ಧ್ಯಾನದ ಕೊನೆಯ ಅರ್ಧಗಂಟೆಯಲ್ಲಿ ಪ್ರಿಯಾಂಕಾ, ಸಪ್ತರ್ಷಿ ಪ್ರಾಣಾಯಾಮ ಅಭ್ಯಾಸದಲ್ಲಿದ್ದ ದೃಶ್ಯ ಕಾಣಿಸಿತು. ಮೊದಲ ಸುತ್ತಿನ ಪ್ರಾಣಾಯಾಮದಲ್ಲಿ ಪ್ರಖರವಾದ ನೀಲಿ ಬೆಳಕಿನ ಮೇಲೆ ಒಂದು ಕಿತ್ತಲೆ ಬಣ್ಣದ ಗುಲಾಬಿಯನ್ನು ಆಕೆಯ ಬೆನ್ನೆಲುಬಿನ ಜಾಗದಲ್ಲಿ ನೋಡಿದೆ. ಬೆಳಕು ಹಾಗೂ ಹೂಗಳೆರಡೂ ಮೂಲಾಧಾರ ಚಕ್ರದಿಂದ ಮೇಲೇರಿ ಸಹಸ್ರಾರ ಚಕ್ರವನ್ನು ತಲುಪಿದವು. ಇನ್ನುಳಿದ ಪ್ರಾಣಾಯಾಮದ ಸುತ್ತಿನಲ್ಲಿ ಬರಿಯ ಕಿತ್ತಲೆ ಬಣ್ಣದ ಹೂ ಮಾತ್ರ ಮೇಲೇರುತ್ತಿದ್ದುದನ್ನು ನೋಡಿದೆ.
–ಬ್ರಜಬಂಧು ಮಿಶ್ರಾ

ಆನೇಕಲ್‌ನಲ್ಲಿ ಅಮರ ಜಯಂತಿಯ ಸಮಾರಂಭದಂದು ನನಗೆ ಪ್ರಕಾಶಮಾನವಾದ ಹೊಂಬಣ್ಣದಿಂದ ತುಂಬಿದ್ದ ಅಸಂಖ್ಯಾತ ತಲೆಗಳು ಕಂಡುಬಂದವು. ಆಗ ಗುರೂಜಿಯವರ ಹಿಂದೆ ಒಂದು ದೊಡ್ಡ ಬೆಳಕಿನ ಪ್ರಭಾವಳಿ ಇತ್ತು. ಅದು ನನ್ನ ಕಲ್ಪನೆ ಇರಬಹುದೆಂದು ನಾನು ಸುಮ್ಮನಾಗುವುದರಲ್ಲಿದ್ದೆ, ಆದರೆ ಇದು ನಿಜವೆಂದು ತೋರಿಸಲು ಬೆಳಕು ಇನ್ನಷ್ಟು ಪ್ರಕಾಶಮಾನವಾಯಿತು. –ಒಬ್ಬ ಸಾಧಕ

1–2–2010 ರಂದು ವಾಗ್ದೇವಿ ವಿಲಾಸ ಶಾಲೆಯಲ್ಲಿ ಲೈಟ್ ಚಾನಲ್ ಮಾಡಿದ ನಂತರ, ನಾನು ಕಣ್ಣು ತೆರೆದಾಗ, ಅಲ್ಲಿದ್ದ ಮಕ್ಕಳು ಹಾಗೂ ಮೈದಾನವೆಲ್ಲ ನೀಲಿ ಬೆಳಕಿನಿಂದ ತುಂಬಿದ್ದ ಅನುಭವವಾಯಿತು. ಅಂದಿನಿಂದ ನನ್ನೊಳಗೆ ಮಹರ್ಷಿ ವಿಶ್ವಾಮಿತ್ರರ ಇರುವಿಕೆಯ ಅನುಭವವಾಗುತ್ತಿದೆ. –ಕವಿತಾ ಕಾನಡೆ

'ರಾ' ಹಾಗೂ ಇತರ ಚೈತನ್ಯಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚು ಕ್ರಿಯಾತ್ಮಕ ಮತ್ತು ಬಲಯುತವಾಗುತ್ತಿವೆ. ನನಗೆ ಅದರಲ್ಲಿ, ಪುರುಷ–ಸ್ತ್ರೀ, ಪರಬ್ರಹ್ಮ–ಮಹಾಶಕ್ತಿ, ಮಹಾವಿಷ್ಣು–ಮಹಾಲಕ್ಷ್ಮಿ, ಜೀಸಸ್– ಮೇರಿ, ಇವರೆಲ್ಲರ ಅನುಭವವಾಗುತ್ತದೆ. ಅವರೆಲ್ಲ ಈ ಬೆಳಕಿನಲ್ಲಿ ಒಟ್ಟಾಗಿ ಹೊಸ ಚೈತನ್ಯಗಳನ್ನು ಹೊಮ್ಮಿಸುತ್ತಿರುವ ಅನುಭವವಾಗುತ್ತದೆ. ಪರಮಾಣುಗಳ ಸಮ್ಮಿಲನ ಹಾಗೂ ವಿದಳನ ಕ್ರಿಯೆಗಳು ಜೊತೆ ಜೊತೆಗೆ ನಡೆಯುತ್ತಿರುವುದಕ್ಕೆ ನಾನು ಸಾಕ್ಷಿಯಾದ ಅನುಭವವಾಯಿತು.
–ಯಾಸೂಜಿ ಯಾಮಗೂಚಿ

ಶಂಬಲ ಗ್ರೂಪ್ ಮೀಟಿಂಗ್‌ನಲ್ಲಿ ಗುರೂಜಿಯವರು ಒಬ್ಬ ಸ್ತ್ರೀ–ಋಷಿ, 18ನೇ ಗೇಟನ್ನು ದಾಟಿಸಲು ಬಂದಿದ್ದಾರೆ ಎಂದು ತಿಳಿಸಿದರು. ನಾನು ಕಣ್ಣು ಮುಚ್ಚಿದಾಗ ಶ್ವೇತವರ್ಣದ ನಿಲುವಂಗಿ ಧರಿಸಿ, ಎಡಗೈಯಲ್ಲಿ ಕಮಲವನ್ನು ಹಾಗೂ ಬಲಗೈಯಲ್ಲಿ ಕುಂಭವನ್ನು ಹಿಡಿದಿದ್ದ ತಾರಾದೇವಿಯನ್ನು ನೋಡಿದೆ. ಅಂದು ಬಂದಿದ್ದ ಸ್ತ್ರೀ ಋಷಿ ಅವರೇ ಇರಬಹುದು ಎಂದು ನನಗನಿಸಿತು.
–ನಾಗಮಣಿ ಚಂದ್ರಶೇಖರ್

ಮಂಜಿನಿಂದ ಕಟ್ಟಿದ ದೇಗುಲದಂತಹ ಕಟ್ಟಡವನ್ನು ನೋಡಿದೆ. ಅದರ ತಳಭಾಗದಲ್ಲಿ ತಿಳಿ ಹಸಿರು, ನೀಲಿ ಹಾಗೂ ನೇರಳೆ ಬಣ್ಣದ ಬೆಳಕುಗಳು ಕಂಡುಬಂದವು. ನಂತರ ಇಡೀ ದೇಗುಲ ಕಿತ್ತಳೆ ಬಣ್ಣದ ಬೆಳಕಿನಿಂದ ತುಂಬಿಹೋಯಿತು. ಮಂಜಿನಿಂದಾವೃತವಾದ ಪರ್ವತಗಳನ್ನು ಮತ್ತು ಅದರ ಹಿಂದೆ ಕಡುನೀಲಿ ಬಣ್ಣದ ಸೂರ್ಯ ಉದಯಿಸುತ್ತಿರುವುದನ್ನು ನೋಡಿ ಬಹಳ ಆನಂದವಾಯಿತು. –ರೂಥಾ

14–01–2010ರಂದು ಧ್ಯಾನ ಮಾಡುತ್ತಿದ್ದಾಗ, ಇದ್ದಕ್ಕಿದ್ದಂತೆಯೇ ನನ್ನನ್ನು ನಾನು ಹಿಮಾಲಯದಲ್ಲಿ ಕಂಡೆ. ಏಳು ಅಡಿ ಎತ್ತರದ ವ್ಯಕ್ತಿಯೊಬ್ಬರು ನನ್ನನ್ನು ಸುರಂಗದ ಮೂಲಕ ಒಂದು ಸುಂದರ ತಾಣಕ್ಕೆ ಕರೆದೊಯ್ದರು. ಅಲ್ಲಿ ಭಗವಾನ್ ವಿಷ್ಣು, ಲಕ್ಷ್ಮಿ ಸಮೇತನಾಗಿ ಆದಿಶೇಷನ ಮೇಲೆ ಕುಳಿತಿದ್ದರು. ಅವರಿಂದ ನಾನು ಬೆಳಕಿನ ರೂಪದಲ್ಲಿ ಚೈತನ್ಯಗಳನ್ನು ಪಡೆದೆ. ನಂತರ ಭಗವಾನ್ ಶಿವ, ಮಹರ್ಷಿ ಅಮರ ಮತ್ತು ಗುರೂಜಿಯವರು ಕೂಡಾ ಅಲ್ಲಿ ಇದ್ದುದನ್ನು ನೋಡಿದೆ. ಶಿವಲಿಂಗದಿಂದ ನೀಲಿ ಬಣ್ಣದ ಬೆಳಕು ಹರಿದು ಬರುತ್ತಿದ್ದುದನ್ನು ನೋಡಿದೆ. ನನಗೆ ಈ ಶಿವಲಿಂಗ ಮತ್ತು 'ರಾ' ಧ್ಯಾನ ಮಂದಿರಕ್ಕೆ ಸಂಬಂಧವಿರಬೇಕೆಂಬ ಯೋಚನೆ ಬಂದ ಕೂಡಲೇ ನನ್ನೊಳಗೆ ಬಲವಾದ ಕಂಪನಗಳು ಉಂಟಾದವು. ಆಗ ಚಕ್ರಾಕಾರದಲ್ಲಿ ಏಳು ಬೆಳಕುಗಳನ್ನು ನೋಡಿದೆ.
–ಸುದರ್ಶನ್ ಹೆಚ್.ಸಿ

ಒಂದು ಸಂದರ್ಭದಲ್ಲಿ ನನ್ನ ದೇಹ ಧ್ಯಾನ ಮಾಡುತ್ತಿದ್ದರೂ, ನನ್ನ ನಿಜ ಸ್ವರೂಪವು ಪ್ರಕಾಶಮಾನವಾದ ಬಿಳಿಯ ಬೆಳಕಿನಲ್ಲಿ ತೇಲಾಡುತ್ತಿತ್ತು. ಅನೇಕ ಬಾರಿ ನನ್ನೊಳಗೆ ಹರಿದು ಬರುವ ಚೈತನ್ಯಗಳ ಅನುಭವ ನನಗಾಗುತ್ತದೆ.
–ಪೂರ್ಣಿಮಾ ಪುರುಲೇಕರ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ